ಸತ್ಯ. ಕೇವಲ ಕೆಂಪು ಬಣ್ಣ ಮಾತ್ರವಲ್ಲದೆ ಹಸಿರು, ಹಳದಿ, ನೀಲಿ ಬಣ್ಣದ ಮಲ್ಟಿಕಲರ್ ಪೀಕಾಕ್ ಮೆಹೆಂದಿ ಜನಪ್ರಿಯವಾಗಿದೆ.

ಈ ನವಿಲಿನ ವಿನ್ಯಾಸದ ಮೆಹೆಂದಿಯಲ್ಲಿ ಸಾಕಷ್ಟು ವೈವಿಧ್ಯಗಳು ಲಭ್ಯವಿದ್ದು, ವಧುವಿಗಾಗಿಯೇ ವಿಶೇಷವಾಗಿ ರಾಜಸ್ಥಾನಿ ಡಿಸೈನ್ ಜನಪ್ರಿಯವಾಗಿದೆ. ಅರಮನೆ, ಆನೆ, ಗೋಪುರಗಳ ಮಧ್ಯೆ ನವಿಲಿನ ನರ್ತನವನ್ನು ಚಿತ್ರಿಸಿ ವಧುವರರ ಹೆಸರನ್ನು ಬರೆಯಲಾಗುತ್ತದೆ. ಪೂರ್ತಿ ಮೊಣಕೈನಿಂದ ಅಂಗೈ ತನಕವೂ ಹಾಕುವ ರಾಜಸ್ಥಾನಿ ಶೈಲಿಯ ಮೆಹೆಂದಿ ರಾಯಲ್ ನೋಟ ನೀಡುತ್ತದೆ. ಮತ್ತೊಂದು ಪ್ರಸಿದ್ಧವಾದದ್ದು ಟ್ಯಾಟೂ ಪೀಕಾಕ್ ಮೆಹೆಂದಿ ಡಿಸೈನ್. ಟ್ಯಾಟೂ ತರಹದ ಅಪಿಯರೆನ್ಸ್ ನೀಡುವ ಈ ಡಿಸೈನ್ ವಧುವಿನ ತಂಗಿ ಮತ್ತು ಗೆಳತಿಯರಿಗೆ ಪರ್ಫೆಕ್ಟ್ ಎನ್ನಲಾಗಿದೆ. ಮತ್ತೊಂದು ಬೆಲ್ ಪೀಕಾಕ್ ಡಿಸೈನ್. ಇದರಲ್ಲಿ ಅಂಗೈನಿಂದ ಪ್ರಾರಂಭವಾಗುವ ವಿನ್ಯಾಸ ಅಂಗೈ ಒಳಗೆ ನವಿಲಿನಿಂದ ಪೂರ್ಣವಾಗುತ್ತದೆ. ಹೆಚ್ಚು ಆಡಂಬರ ಎನಿಸದ ಈ ಮೆಹೆಂದಿ ಸಿಂಪಲ್ಲಾಗಿ ಸುಂದರ ಕಾಣಲು ಬಯಸುವವರಿಗೆ ಬೆಸ್ಟ್ ಚಾಯ್ಸ್.

## ಪೀಕಾಕ್ ಪ್ರಿಂಟೆಡ್ ಡ್ರೆಸ್

ಉಡುಪಿನ ಮೇಲೆ ಚಂದದ ನವಿಲಿನ ಪ್ರಿಂಟ್ ಇದ್ದರೆ ಯಾರು ಇಷ್ಟಪಡುವುದಿಲ್ಲ ಹೇಳಿ? ಪ್ರಕೃತಿಯ ಪ್ರತಿಫಲಿತ ಡ್ರೆಸ್‌ಗಳು ಎವರ್‌ಗ್ರೀನ್ ಎನಿಸಿದ ಬೆನ್ನಲ್ಲೇ ಪೀಕಾಕ್ ಪ್ರಿಂಟ್ ಮಾರುಕಟ್ಟೆಯಲ್ಲಿ ಭರ್ಜರಿ ವಹಿವಾಟು ನಡೆಸುತ್ತಿದೆ. ನವಿಲು ಅಥವಾ ನವಿಲುಗರಿಯ ಪ್ರಿಂಟ್ ಇರುವ ಸೀರೆ, ಕುರ್ತಾ, ಚೂಡಿದಾರ, ಮಿಡಿಮ್ಯಾಕ್ಸಿ ಎಲ್ಲವೂ ಅದ್ಭುತ. ಉಡುಪುಗಳಲ್ಲಿ ಹಣ್ಣು, ಹೂವುಗಳಂತೆಯೇ ನವಿಲಿನ ಚಿತ್ರವನ್ನು ಮಕ್ಕಳು ಸಹ ಇಷ್ಟಪಟ್ಟು ಧರಿಸುತ್ತಾರೆ. ಆಧುನಿಕ ಮತ್ತು ಸಾಂಪ್ರದಾಯಿಕ ಎರಡೂ ಮನೋಭಾವದ ಮಹಿಳೆಯರಿಗೆ ಈ ನವಿಲಿನ ಪ್ರಿಂಟ್ ಇರುವ ಉಡುಪುಗಳು ಇಷ್ಟವಾಗುತ್ತವೆ. ನೈಜ ಗರಿಗಳಿಂದ ತಯಾರಿಸಿದ ಉಡುಪುಗಳ ಪ್ರದರ್ಶನವನ್ನು ಫ್ಯಾಷನ್ ಶೋಗಳಲ್ಲಿ ಹೆಚ್ಚಾಗಿ ಕಾಣಬಹುದು. ಪುಟ್ಟ ಪುಟ್ಟ ಗರಿಗಳನ್ನು ಕೂಡಿಸಿ ಡ್ರೆಸ್ ಹೊಲಿದು ಬೇಬಿ ಫೋಟೊ ಶೂಟಿಂಗ್ ಮಾಡಲಾಗುತ್ತದೆ.



## ಒಡವೆಗಳಲ್ಲಿ ನವಿಲು

ಬಂಗಾರ, ಬೆಳ್ಳಿ, ವಜ್ರಗಳಲ್ಲದೆ ಆರ್ಟಿಫಿಷಿಯಲ್ ಜ್ಯುವೆಲರಿಗಳಲ್ಲಿ ಸಹ ಪೀಕಾಕ್ ಡಿಸೈನ್ ಎವರ್‌ಗ್ರೀನ್. ನವರತ್ನ ಅಥವಾ ಹರಳುಗಳಲ್ಲಿ ತಯಾರಾದ ಜೋಡಿ ನವಿಲುಗಳ ಕಿವಿಯೋಲೆ, ನೆಕ್ಲೇಸ್‌ಗಳು ಎಲ್ಲಾ ಬಣ್ಣದ ಸೀರೆಗೆ ಮ್ಯಾಚಿಂಗ್ ಆಗುತ್ತವೆ. ನರ್ತಿಸುವ ನವಿಲಿನ ಪೆಂಡೆಂಟ್ ಸೆಟ್ ಚಂದದ ಮುತ್ತಿನ ಹಾರದ ತುದಿಯಲ್ಲಿ ಒಂದು ಅದ್ಭುತ ಲುಕ್ ನೀಡುವುದರಲ್ಲಿ ಸಂಶಯವಿಲ್ಲ. ಇನ್ನು ನವಿಲಿನ ನೈಜ ಗರಿಗಳಿಂದಲೇ ತಯಾರಾದ ಕಿವಿಯೋಲೆ, ರಿಸ್ಟ್ ಬ್ಯಾಂಡ್, ನೆಕ್ಲೇಸ್‌ಗಳು ಮಾಡರ್ನ್ ಯುವತಿಯರ ಫ್ಯಾಷನ್ ಸ್ಟೇಟ್‌ಮೆಂಟ್‌ಗೆ ಸೂಪರ್ ಎನಿಸಿದೆ. ಫ್ಯಾಬ್ರಿಕ್ ಜ್ಯುವೆಲ್ಲರಿಗಳ ಪದಕದಲ್ಲಿ ಪುಟ್ಟ ನವಿಲು ಗರಿ ಇಟ್ಟು ಸಿದ್ಧಗೊಳಿಸಿದ ಚೋಕರ್‌ನೆಕ್ಲೇಸ್ ವೀಕೆಂಡ್ ಪಾರ್ಟಿಗಳಲ್ಲಿ ನೂರು ಜನರ ಮಧ್ಯ ಗುರುತಿಸುವಂತೆ ಮಾಡುತ್ತದೆ.

## ರಂಗವಲ್ಲಿ-ಚಂದದ ಹೂಬಳ್ಳಿ

ರಂಗವಲ್ಲಿ ನಮ್ಮ ಸಂಸ್ಕೃತಿಸಂಪ್ರದಾಯಗಳ ಪ್ರತಿಬಿಂಬ. ಹೂವು, ಬಳ್ಳಿಗಳಂತೆಯೇ ನವಿಲುಗಳ ರಂಗವಲ್ಲಿ ಮನೆ ಅಂಗಳದ ಸೌಂದರ್ಯ ಹೆಚ್ಚಿಸುತ್ತದೆ. ವಿಶೇಷ ಸಭೆಸಮಾರಂಭಗಳಲ್ಲಿ ನವಿಲುಗಳ ರಂಗವಲ್ಲಿ ಆಕರ್ಷಕವಾಗಿ ಕಾಣುತ್ತದೆ.

## ಇಂಟೀರಿಯರ್ ಡೆಕೊರೇಷನ್

ಮನೆ ಎಷ್ಟೇ ಸುಂದರವಾಗಿದ್ದರೂ ಇಂಟೀರಿಯರ್ ಡೆಕೊರೇಷನ್ ಅಷ್ಟೇ ಮುಖ್ಯ. ಗೃಹಾಲಂಕಾರದಲ್ಲಿ ಪೀಕಾಕ್ ಡಿಸೈನ್ ಇತ್ತೀಚಿನ ವರ್ಷಗಳಲ್ಲಿ ಹೆಸರು ಮಾಡುತ್ತಿದೆ. ಬೆಡ್ ಶೀಟ್ ಕವರ್, ಟೇಬಲ್ ಕ್ಲಾತ್, ಕರ್ಟನ್, ಲ್ಯಾಂಪ್ ಶೇಡ್ ಕವರ್, ಸೋಫಾ ಕವರ್ ಎಲ್ಲದರಲ್ಲೂ ಪೀಕಾಕ್ ಪ್ರಿಂಟ್ ಮನೆಯ ಅಂದ ಹೆಚ್ಚಿಸುತ್ತದೆ. ನೈಜ ಗರಿಗಳಿಂದ ತಯಾರಾದ ವಾಲ್ ಹ್ಯಾಂಗಿಂಗ್, ಡ್ರೀಮ್ ಕ್ಯಾಚರ್‌ಗಳು ಮನೆಯ ಡ್ರಾಯಿಂಗ್ ರೂಂ ಅನ್ನು ಆಕರ್ಷಣೀಯಗೊಳಿಸುತ್ತವೆ. ಮನೆಯಲ್ಲಿ ನವಿಲು ಗರಿ ಇಡುವುದರಿಂದ ಸಕಾರಾತ್ಮಕ ಶಕ್ತಿ ಹೆಚ್ಚುತ್ತದೆ. ಮನೆಯಲ್ಲಿ ಸದಾಕಾಲ ಶಾಂತಿ, ಸಮೃದ್ಧಿ ನೆಲೆಸಿರುತ್ತದೆ ಎಂಬ ನಂಬಿಕೆಯೂ ಇದೆ.